# <u>ಕರ್ನಾಟಕ ಗೃಹ ಮಂಡಳಿ</u>

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಉಪ ವಿಭಾಗ, ಹಾಸನ.
ದೂರವಾಣಿ ಸಂಖ್ಯೆ: 08172-268681, 267189 ಇಮೇಲ್: aeekhbhsn@gmail.com

ಅಧಿಸೂಚನೆ ಸಂ: ಕಗೃಮಂ/ಸಕಾಅ/ಹಾಉವಿ/ಇ-ಹ/06/2020-21/ ದಿನಾಂಕ: 15-06-2020

**ಹಾಸನ ನಗರದಲ್ಲಿ ಕರ್ನಾಟಕ ಗೃಹ ಮಂಡಳಿಯು, ಹಾಸನ-ಚನ್ನಪಟ್ಟಣ ಬಡಾವಣೆಯ ಮೂಲೆ ನಿವೇಶನಗಳ ಇ-ಹರಾಜು ಪ್ರಕಟಣೆ**

| |
|---|
| ಇ-ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕಃ **18.06.2020** ಬೆಳಗ್ಗೆ: 10-00 ಗಂಟೆಗೆ |
| ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕಃ **26.06.2020** ಸಂಜೆ: 5-00 ಗಂಟೆ |
| ಇ-ಹರಾಜನ್ನು ಮುಕ್ತಾಯಗೊಳಿಸುವ ಕೊನೆಯ ದಿನಾಂಕಃ **29.06.2020** ಸಂಜೆ 5-00 ಗಂಟೆಗೆ |
| ಮಂಡಳಿಯ ಆರಂಭಿಕ ಬಿಡ್ ದರ ಹಾಸನ ಚನ್ನಪಟ್ಟಣ ಗೃಹ ಮಂಡಳಿ ಬಡಾವಣೆಯ ಮೂಲೆ ನಿವೇಶನಗಳಿಗೆ ಪ್ರತಿ ಚದರಡಿಗೆ **ರೂ.3010/-** ರಂತೆ ದರ ನಿಗದಿಪಡಿಸಿದೆ. **"ಬಿಡ್ ದರ ಪ್ರತಿ ಚದುರಡಿಗೆ ರೂ.25/-ಗಳ ಗುಣಕದಲ್ಲಿ ಕನಿಷ್ಟ ಏರಿಕೆ"** |

ಕರ್ನಾಟಕ ಗೃಹ ಮಂಡಳಿಯು ವಾಸಯೋಗ್ಯ ಮೂಲೆ ನಿವೇಶನಗಳ ಇ-ಹರಾಜು ಪ್ರಕಟಿಸಿದೆ. ಈ ನಿವೇಶನಗಳ ಹರಾಜು ಮಾರಾಟಗಳನ್ನು ಕರ್ನಾಟಕ ಗೃಹ ಮಂಡಳಿಯ ಕಾಯ್ದೆ ಮತ್ತು ನಿಯಮಗಳ ಅನುಸಾರ ನಡೆಸಲಾಗುವುದು. ನಿವೇಶನಗಳನ್ನು **"ಎಲ್ಲಿ ಹೇಗಿದೆಯೋ ಹಾಗೆ ಇರುವ ಸ್ಥಿತಿಯಲ್ಲಿ"** ಮಾರಾಟ ಮಾಡಲಾಗುತ್ತಿದ್ದು, ಇ-ಹರಾಜು ಮೂಲಕ ಬಿಡ್ ಮಾಡಬಹುದಾಗಿರುತ್ತದೆ.

**ಹಾಸನ ಚನ್ನಪಟ್ಟಣ ಬಡಾವಣೆಯ 15 ಮೂಲೆ ನಿವೇಶನಗಳ ವಿವರ**

| Sl. No | Category | Site No | Dimensions in Mtrs | Area in Sq.Mtrs | Area in Sq.Ft | Facing |
|---|---|---|---|---|---|---|
| 1 | HIG-II | 1 | 17.5 X (13+18)/2 | 271.25 | 2919.74 | North-East |
| 2 | HIG-I | 284 | (20.50 +23.6)/2 X 18 | 396.9 | 4272.23 | North-East |
| 3 | HIG-I | 506 | 18 X 12 | 216.00 | 2325.02 | North-West |
| 4 | HIG-I | 1225 | 13 X 18 | 234.00 | 2518.78 | East-South |
| 5 | MIG | 497 | 15 X 15 | 225.00 | 2421.90 | North-East |
| 6 | MIG | 540 | 9 X 15 | 135.00 | 1453.14 | West-South |
| 7 | MIG | 561 | (15+7.0)/2 X 15.1 | 166.10 | 1787.90 | North-West |
| 8 | MIG | 674 | 15.4 X (15.2+7.9)/2 | 177.87 | 1914.59 | North-East |
| 9 | MIG | 1134 | 15 X (12.0+13.0)/2 | 187.50 | 2018.25 | North-East |
| 10 | MIG | 1291 | 9 X 15 | 135.00 | 1453.14 | North-West |
| 11 | LIG | 268 | 9 X (11.9+12.1)/2 | 108.00 | 1162.51 | West-South |
| 12 | LIG | 656 | (14.7+14.6)/2 X 12 | 175.80 | 1892.31 | East-South |
| 13 | LIG | 1069 | 12.1 X (9+11.8)/2 | 125.84 | 1354.54 | North-West |
| 14 | LIG | 1188 | 12 X (13.8+14)/2 | 166.80 | 1795.44 | North-East |
| 15 | LIG | 1576 | (16.5+13.3)/2 X 12 | 178.80 | 1924.60 | East-South |

**<u>ಇ-ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳು ಹಾಗೂ ಇತರೆ ಮಾಹಿತಿಗಳಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಹಾಸನ ರವರ ಕಚೇರಿಯನ್ನು ಅಥವಾ ದೂರವಾಣಿ ಸಂಖ್ಯೆ:08172-268681, ಮೊಬೈಲ್ ಸಂಖ್ಯೆ: 9945496117 ಇವರನ್ನು ಸಂಪರ್ಕಿಸುವುದು.</u>**

**ನಿವೇಶನಗಳ ಸ್ಥಳ ಮತ್ತು ಇತರೆ ಮಾಹಿತಿಗಳಿಗೆ** www.eproc.karnataka.gov.in and also visit our website www.karnatakahousing.com ಗೆ ಭೇಟಿ ನೀಡಿ.

ದಿನಾಂಕಃ 15.06.2020

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಕರ್ನಾಟಕ ಗೃಹ ಮಂಡಳಿ
ಉಪ ವಿಭಾಗ, ಹಾಸನ

ಸಹಾಯಕ ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ
ಉಪವಿಭಾಗ, ಹಾಸನ.

## ಇ-ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳು ಈ ಕೆಳಕಂಡಂತಿವೆ.

1. ಇ.ಎಂ.ಡಿ. ಮೊತ್ತ ಮತ್ತು ಇ-ಹರಾಜಿನ ಶುಲ್ಕವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಾವತಿ ಮಾಡಬೇಕು, ಪಾವತಿ ಮಾಡುವ ವಿಧಾನವನ್ನು www.eproc.karnataka.gov.inರಲ್ಲಿ ನೋಡಬಹುದು.
2. ಇ.ಎಂ.ಡಿ. ಮೊತ್ತ ರೂ.50,000/-ಗಳನ್ನು ನಿಗದಿಗೊಳಿಸಿದೆ.
3. ಇ-ಹರಾಜಿನಲ್ಲಿ ಭಾಗವಹಿಸುವಾಗ ಬಿಡ್ಡುದಾರರು upload ಮಾಡುವ ದಾಖಲಾತಿ ಮತ್ತು ವಿವರವು ಅಂತಿಮವಾಗಿದ್ದು, ನಂತರ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ. ಇ-ಹರಾಜಿನಲ್ಲಿ ಯಾರ ಹೆಸರಿನಲ್ಲಿ ಬಿಡ್ ಮಾಡುತ್ತಾರೋ. ಅವರ ಹೆಸರಿಗೆ ಮಾತ್ರ ಹರಾಜು ಮಾರಾಟ ದೃಢೀಕರಣ ಪತ್ರ ನೀಡಲಾಗುವುದು. (ಇ-ಹರಾಜಿನ ಭಾಗವಾಗಿ ಈ ದಾಖಲೆ ಲಗತ್ತಿಸಲಾಗಿದೆ)
4. ಬಿಡ್ಡುದಾರರು, ಬಿಡ್ಡುದಾರರ ಹೆಸರಿನ ಖಾತೆಯಿಂದಲೇ ಮಂಡಳಿಗೆ ಪೂರ್ಣ ಹಣ ಪಾವತಿಸಲು ತಿಳಿಯಪಡಿಸಿದೆ. ಆರ್.ಟಿ.ಜಿ.ಎಸ್. ಮಾಡುವಾಗ ಬಿಡ್ಡುದಾರರ ಹೆಸರು, ಬಿಡ್ ಮಾಡಿದ ನಿವೇಶನ ಸಂಖ್ಯೆ ಮತ್ತು ಬಡಾವಣೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸಬೇಕು.
5. ಯಶಸ್ವಿ ಬಿಡ್ಡುದಾರರು (ಅತಿ ಹೆಚ್ಚಿನ ಮೌಲ್ಯ ಬಿಡ್ಡು ಮಾಡಿದ ಬಿಡ್ಡುದಾರರು) ಬಿಡ್ ಅಂಗೀಕೃತಗೊಂಡಿರುವ ಬಗ್ಗೆ ಇ-ಪೋರ್ಟಲ್ ಮುಖಾಂತರವೇ ಪರಿಶೀಲಿಸಿಕೊಂಡು, ನಿವೇಶನದ ಒಟ್ಟು ಮೌಲ್ಯದ ಪೈಕಿ ಶೇ.25ರಷ್ಟು ಮೌಲ್ಯವನ್ನು "ಇ.ಎಂ.ಡಿ. ಮೊತ್ತ ರೂ.50,000/- ಸೇರಿದಂತೆ" ಇ-ಹರಾಜು ಮುಕ್ತಾಯಗೊಂಡ ಅವಧಿಯ 72 ಗಂಟೆಯೊಳಗಾಗಿ ಕೆಳಕಂಡ ಮಂಡಳಿಯ ಬ್ಯಾಂಕ್ ಖಾತೆಗೆ ಪಾವತಿ ಮಾಡದೇ ಇದ್ದಲ್ಲಿ, ಇ.ಎಂ.ಡಿ. ಮೊತ್ತವಾದ ರೂ.50,000/-ಗಳನ್ನು ಮಂಡಳಿಯಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

| | |
|---|---|
| ಬ್ಯಾಂಕಿನ ಹೆಸರು | : **ಕಾರ್ಪೋರೇಶನ್ ಬ್ಯಾಂಕ್, ಎನ್.ಆರ್.ಸರ್ಕಲ್, ಹಾಸನ** |
| ಖಾತೆದಾರರ ಹೆಸರು | : **ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ಹಾಸನ.** |
| ಖಾತೆ ಸಂಖ್ಯೆ | : **520101225124773** |
| ಪಾವತಿ ವಿಧಾನ | : **RTGS/ NEFT / NET BANKING** |
| **IFSC CODE** | : **CORP0000020** |

6. ಹರಾಜು ದೃಢೀಕರಣ ಪತ್ರ ತಲುಪಿದ 60 ದಿನಗಳ ಒಳಗಾಗಿ ಶೇ.75ರಷ್ಟು ಉಳಿಕೆ ಬಾಕಿ ಮೊತ್ತ ಪಾವತಿ ಮಾಡುವುದು. ತಪ್ಪಿದಲ್ಲಿ ಮಂಡಳಿಗೆ ಈಗಾಗಲೇ ಪಾವತಿಸಿರುವ ಶೇ.25ರಷ್ಟು ಬಿಡ್ಡುಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
7. ಬಿಡ್ಡುದಾರರು, ಕರ್ನಾಟಕ ಗೃಹ ಮಂಡಳಿಯ ಕಾಯ್ದೆ ಮತ್ತು ನಿಯಮಾವಳಿಯನ್ನು ಪಾಲಿಸಬೇಕಾಗಿರುತ್ತದೆ. ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹರಾಜಿಗೆ ಸೂಚಿಸಿದ ನಿವೇಶನಗಳನ್ನು ಹಿಂಪಡೆಯುವ ಹಾಗೂ ಬಿಡ್ಡು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕರ್ನಾಟಕ ಗೃಹ ಮಂಡಳಿ ಕಾಯ್ದಿರಿಸಿಕೊಂಡಿದೆ.
8. ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ 5 ನಿಮಿಷಗಳ ಕಾಲ ವಿಸ್ತರಣೆಯಾಗಿರುತ್ತದೆ.
9. ಬಿಡ್ಡಿನ ಸ್ವತ್ತುಗಳಿಗೆ ಪ್ರತಿ ಚದರಡಿಗೆ ದರ ರೂ.25/- ಬಿಡ್ ಅಂತರವನ್ನು ನಿಗದಿಪಡಿಸಿದೆ.
10. ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಎರಡು ಜನ ಭಾಗವಹಿಸಬೇಕಾಗಿರುತ್ತದೆ. ಒಂದು ಸ್ವತ್ತಿಗೆ ಒಬ್ಬರೇ (Single Bid) ಬಿಡ್ ಮಾಡಿದಲ್ಲಿ ತಿರಸ್ಕರಿಸಲಾಗುವುದು.
11. ಹರಾಜಿನಲ್ಲಿಡಲಾದ ಸ್ವತ್ತುಗಳ ಅಳತೆ ಮತ್ತು ವಿಸ್ತೀರ್ಣದಲ್ಲಿ ಏನಾದರೂ ಹೆಚ್ಚು-ಕಮ್ಮಿ ಆದಲ್ಲಿ ಅಂತಿಮ ಅಳತೆ ಮತ್ತು ವಿಸ್ತೀರ್ಣಕ್ಕೆ ಬಿಡ್ಡುದಾರರು ಮೊತ್ತ ಪಾವತಿಸಿ, ಕ್ರಯ ಪತ್ರ ಮಾಡಿಕೊಳ್ಳಬೇಕಾಗಿರುತ್ತದೆ. ಯಶಸ್ವಿ ಬಿಡ್ಡುದಾರರು ನಿವೇಶನದ ಇ-ಖಾತಾವನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಯಿಂದ ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳುವುದು.
12. ಸ್ವತ್ತುಗಳನ್ನು **"ಎಲ್ಲಿ ಹೇಗಿದೆಯೋ ಹಾಗೆ ಇರುವ ಸ್ಥಿತಿಯಲ್ಲಿ"** (As is where is basis condition) ಮಾರಾಟ ಮಾಡಲಾಗುತ್ತಿದೆ.
13. ಭಾಗವಹಿಸುವ ವಿಧಾನ ಮತ್ತು ಷರತ್ತುಗಳ ಬಗ್ಗೆ ಹೆಚ್ಚಿನ ವಿವರ ತಿಳಿದುಕೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಯೋಜನಾ ಕಛೇರಿ, ಕರ್ನಾಟಕ ಗೃಹ ಮಂಡಳಿ, ಹಾಸನ ಇವರನ್ನು ಸಂಪರ್ಕಿಸಲು ಕೋರಿದೆ ಹಾಗೂ ಪೂರ್ಣ ವಿವರಗಳನ್ನು ಮಂಡಳಿಯ ವೆಬ್‌ಸೈಟಿನಲ್ಲಿ ವೀಕ್ಷಿಸಬಹುದು.

**ಇ-ಬಿಡ್ಡಿಂಗ್ ಸ್ಪಷ್ಟೀಕರಣಗಳು, ಆಕ್ಷೇಪಣೆಗಳು ಅಥವಾ ಯಾವುದೇ ಇತರೆ ಮಾಹಿತಿಗೆ ಕೆಳಕಂಡ ಇ-ಪ್ರಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ, ಸಹಾಯವಾಣಿ ದೂರವಾಣಿ ಸಂಖ್ಯೆ: 080-22371090,22373788**

-: ಇತರೆ ವಿವರಗಳಿಗಾಗಿ :-

ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಉಪವಿಭಾಗ, ಹಾಸನ ದೂರವಾಣಿ ಸಂಖ್ಯೆ: 08172-268681, 267189

ನಿವೇಶನಗಳ ಸ್ಥಳ ಮತ್ತು ಇತರೆ ಮಾಹಿತಿಗಳಿಗೆ : www.eproc.karnataka.gov.in and also visit our website www.karnatakahousing.com ಗೆ ಭೇಟಿ ನೀಡಿ

ದಿನಾಂಕ: 15.06.2020

ಸಹಾಯಕ ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ,
ಉಪವಿಭಾಗ,ಹಾಸನ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಕರ್ನಾಟಕ ಗೃಹ ಮಂಡಳಿ
ಉಪ ವಿಭಾಗ, ಹಾಸನ